**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 30–07–2026**

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

ಚಾಸಾ-2 ನನ್ನ ಸಂಬಂಧಿಕರು ಇರುತ್ತಾರೆ. ಚಾಸಾ-3 ನನಗೆ ಪರಿಚಯಸ್ಥರು ಇರುತ್ತಾರೆ. ಚಾಸಾ-4 ನನ್ನ ತಾಯಿ. ಚಾಸಾ-6 ನನ್ನ ತಾಯಿಯ ಅಣ್ಣ ಇರುತ್ತಾರೆ. ಸಿದ್ದಾಪುರದಿಂದ ನೆಜ್ಜೂರಿಗೆ ಬೆಳಿಗ್ಗೆ ಒಂದು ಬಸ್ ಬರುತ್ತದೆ. ಸದರಿ ಬಸ್ ಸಾಗರಕ್ಕೆ ಹೋಗಿ ಪುನಃ ನೆಜ್ಜೂರಿಗೆ ಸಂಜೆ 6-00 ಗಂಟೆ ಸಮಯಕ್ಕೆ ವಾಪಸ್ ಬರುತ್ತದೆ. ಬೆಳಿಗ್ಗೆ ಬಸ್ ಬಂದು ಹೋದ ನಂತರ ಸಂಜೆಯ ವರೆಗೂ ಬೇರೇಯ ಬಸ್ ಸಂಚಾರ ಇರುವುದಿಲ್ಲ ಎಂದರೆ ಸರಿ. 2024 ರಲ್ಲಿ ನಾನು ದ್ವಿತೀಯ ಪಿ.ಯು.ಸಿಯನ್ನು ಸಾಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜ್ ನಲ್ಲಿ ಓದುತ್ತಿದ್ದೆ. ನಮ್ಮ ದ್ವಿತೀಯ ಪಿಯುಸಿ ಕಾಲೇಜಿನ ಸಮಯ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆ ವರೆಗೂ ಇರುತ್ತದೆ.

ಸಾಗರ ಬಸ್ ನಿಲ್ದಾಣದಿಂದ ನಮ್ಮ ಕಾಲೇಜು ಅಂದಾಜು 2 ಕಿ. ಮೀ. ಅಂತರ ಇರುತ್ತದೆ. ನಾನು ಕಾಲೇಜ್ ನಿಂದ ಬಸ ನಿಲ್ದಾಣಕ್ಕೆ ಪ್ರತಿದಿನ ನಡೆದುಕೊಂಡು ಬರುತ್ತಿದ್ದೆನು. ಸಾಗರದಿಂದ ನಾನು ತಾಳಗುಪ್ಪಕ್ಕೆ ಬಸ್ ನಲ್ಲಿ ಬಂದು , ತಾಳಗುಪ್ಪದಿಂದ ನೆಜ್ಜೂರಿಗೆ ಆಟೊದಲ್ಲಿ ಬರುತ್ತಿದ್ದೆನು. ಸಾಗರದಿಂದ ತಾಳಗುಪ್ಪಕ್ಕೆ ಬರಲು ಬಸ್ ನಲ್ಲಿ 45 ನಿಮೀಷ ಬೇಕಾಗುತ್ತದೆ ಎಂದರೆ ಸರಿ. ನಮ್ಮ ಕಾಲೇಜಿನಿಂದ ಸಾಗರ ಬಸ್ ನಿಲ್ದಾಣಕ್ಕೆ ಬರಲು ಅಂದಾಜು 15 ನಿಮೀಷಗಳ ಕಾಲಾವಕಾಶ ಬೇಕಾಗುತ್ತದೆ. ತಾಳಗುಪ್ಪದಿಂದ ನೆಜ್ಜೂರಿಗೆ ಬರಲು ಆಟೊದಲ್ಲಿ 20 ನಿಮೀಷ ಸಮಯ ಸಾಕಾಗುತ್ತದೆ.

ದಿಃ 26-11-2024 ರಂದು ನಾನು ಕಾಲೇಜಿಗೆ ಹೋಗಿದ್ದೆನು. ಆ ದಿನ ನೀವು ಕಾಲೇಜಿನಿಂದ ಮನೆಗೆ ಹೋದಾಗ ನಿಮ್ಮ ತಾಯಿ ಮನೆಯಲ್ಲಿ ಇದ್ದರೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ದೇವಸ್ಥಾನಕ್ಕೆ ಹೋಗಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ಆ ದಿನ ಯಾವ ದೇವಸ್ಥಾನಕ್ಕೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಅಮ್ಮ ಬಂದ ನಂತರ ಯಾವ ದೇವಸ್ಥಾನಕ್ಕೆ ಹೋಗಿರುತ್ತೀರಾ ಎಂದು ನಾನು ಕೇಳಿರುವುದಿಲ್ಲ. ಆ ದಿನ ನಮ್ಮ ಮನೆಯಲ್ಲಿ ನಾನು ಹಾಗೂ ನನ್ನ ತಂಗಿಯನ್ನು ಹೊರತುಪಡಿಸಿ ಯಾರೂ ಇರಲಿಲ್ಲ.

ಗಲಾಟೆ ಆಯಿತು ಎಂದು ಹೇಳುವ ಸಂದರ್ಬದಲ್ಲಿ ನಿಮ್ಮನ್ನು ಹೊರತುಪಡಿಸಿ, ಬೇರೇ ಯಾರೂ ಇರಲಿಲ್ಲ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದುಗಡೆ ಗೇಟ್ ಇರುತ್ತದೆ ಎಂದರೆ ಸರಿ. ಆ ದಿನ ನೀವು ಕಾಲೇಜಿನಿಂದ ಎಷ್ಟು

ಗಂಟೆಗೆ ಮನೆಗೆ ಬಂದಿರುತ್ತೀರಿ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅಂದಾಜು 3-30 ಗಂಟೆಗೆ ಜಗಳ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಮೊಬೈಲ್ ನಿಂದ ಇನ್ನೊಂದು ಮೊಬೈಲ್ ಗೆ ಕರೆನ್ಸಿ ಹಾಕಿದಾಗ, ಕರೆನ್ಸಿ ಹಾಕಿದ ಮೊಬೈಲ್ ನಂಬರ show ಆಗುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆದ ಕಾರಣ ನನ್ನ ತಂಗಿಯ ಮೊಬೈಲ್ ಗೆ ಯಾರು ಕರೆನ್ಸಿ ಹಾಕಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ನಮ್ಮ ಮನೆಯಿಂದ ಆರೋಪಿಯ ಮನೆಗೆ ಸುಮಾರು ಒಂದುವರೆ ಕಿ. ಮೀ. ಅಂತರ ಇರುತ್ತದೆ. ಚಾಸಾ-3 ರವರ ಮನೆಯಿಂದ ನಮ್ಮ ಮನೆಗೆ ಅಂದಾಜು 2 ಕಿ. ಮೀ ಅಂತರ ಇರುತ್ತದೆ. ದೂರನ್ನು ಹೀಗೆ ಬರೆಯಬೇಕು ಎಂದು ಪೋಲೀಸರು ಹೇಳಿಕೊಟ್ಟಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮ ಕುತ್ತಿಗೆಯನ್ನು ಹಿಡಿದುಕೊಂಡಿದ್ದನು ಎಂದು ನೀವು ದೂರಿನಲ್ಲಿ ಹೇಳಿ ಬರೆಸಿದ್ದು, ನಿಮಗೆ ಗಾಯವಾಗಿತ್ತೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋವು ಆಗಿತ್ತು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ವೈದ್ಯರ ಬಳಿ ಹೇಳಿರುತ್ತೇನೆ. ವೈದರು ನಿಮ್ಮ ಕುತ್ತಿಗೆಯನ್ನು ಪರೀಕ್ಷೆ ಮಾಡಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದಿಃ 27-11-2024 ರಂದು ಪೋಲೀಸರು ನಮ್ಮ ಮನೆಯ ಬಳಿ ಬಂದಿರುತ್ತಾರೆ. ಆ ದಿನ ನಾನು ಕಾಲೇಜಿಗೆ ಹೋಗಿರುವುದಿಲ್ಲ. ನಿ.ಪಿ-4 ಪೋಟೋದಲ್ಲಿ ಒಂದು ಸ್ಥಳದಲ್ಲಿ ನಿಂತುಕೊಂಡಿರುವುದನ್ನು ಬಿಟ್ಟು ಬೇರೇ ಯಾವುದೇ ಚಟುವಟಿಕೆ ಇರುವುದಿಲ್ಲ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ನಿ.ಪಿ-4 ಪೋಟೋದಲ್ಲಿ ಕಬ್ಬಿಣದ ಗೇಟ್ ಕಾಣಿಸುತ್ತಿದೇಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಮ್ಮ ಮನೆಯ ಮುಂದುಗಡೆ ಪುಟ್ಟಣ್ಣಯ್ಯ ಗೌಡರವರ ಮನೆ ಇರುತ್ತದೆ ಎಂದರೆ ಸರಿ. ಅವರ ಮನೆಯಲ್ಲಿ ಯಾವಾಗಲೂ ಜನ ಇರುತ್ತಾರೆ ಎಂದರೆ ಸರಿ. ಅವರ ಮನೆಯ ಬಾಗಿಲು ರಸ್ತೆಯ ಕಡೆಗೆ ಇರುತ್ತದೆ ಎಂದರೆ ಸರಿ. ಆ ದಿನ ಪೋಲೀಸರು ಎಷ್ಟು ಪೋಟೊಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸರು ಪಂಚನಾಮೆ ಮಾಡಿ ಪೋಟೊಗಳನ್ನು ತೆಗೆದುಕೊಂಡು type ಮಾಡಿಕೊಂಡಿರುತ್ತಾರೆ. ಇದನ್ನು ಹೊರತುಪಡಿಸಿ , ಬೇರೇ ಎನ್ನನ್ನು ಮಾಡಿರುವುದಿಲ್ಲವೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೇರೇ ಏನು ಮಾಡಿರುವುದಿಲ್ಲ ಎಂದುನುಡಿಯುತ್ತಾರೆ.



ಪಂಚರರನ್ನು ಯಾರು ಕರೆದಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರೇ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಪಂಚನಾಮೆಗೆ ಎಷ್ಟು ಜನ ಸೇರಿದ್ದರು ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಬ್ಬರು ಪೋಲೀಸರು, ಇಬ್ಬರು ಪಂಚರರು, ನಾನು, ನನ್ನ ತಾಯಿ ಹಾಗೂ ನನ್ನ ಮಾವ ಇದ್ದರು ಎಂದು ನುಡಿಯುತ್ತಾರೆ. ಪೋಲೀಸರು ಸ್ಥಳಕ್ಕೆ ಬೈಕ್ ನಲ್ಲಿ ಬಂದಿರುತ್ತಾರೆ.

ಆರೋಪಿ ನನಗೆ ಪರಿಚಯ ಇರುವುದಿಲ್ಲ. ಆದರೆ ನಮ್ಮ ಊರಿನವನು ಇರುತ್ತಾನೆ. ದಿಃ 26-11-2024 ರಂದು ನಾನು ಹೇಳಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಗೂ ಹಾಗೂ ನನಗೂ ಯಾವುದೇ ದ್ವೇಷ ಇರುವುದಿಲ್ಲ. ನನ್ನ ತಂಗಿಯ ಮೊಬೈಲ್ ಗೆ ಕರೆನ್ಸಿ ಬಂದಿರುವ ಕಾರಣ ನಾನು ಆರೋಪಿ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಕುತ್ತಿಗೆಯನ್ನು ಹಿಡಿದುಕೊಂಡು ಹಲ್ಲೆ ಮಾಡಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( **ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)

**ಸಾ.ಓ.ಹೇ.ಸ.ಒ**

ಸಹಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**

ಸಿದ್ದಾಪುರ